**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 619/2018**

| | | |
|---|---|---|
| ಹೆಸರುಃ | ಶಿಲ್ಪಾ | CW- 10 |
| ಗಂಡನ ಹೆಸರುಃ | ಕುಮಾರ ಯಾನೆ ಪಿನಾಯಿಲ್ ಕುಮಾರ | PW- 13 |
| ವಯಸ್ಸುಃ | 35 ವರ್ಷ | |
| ಉದ್ಯೋಗಃ | ವ್ಯಾಪಾರ | |
| ವಾಸ ಸ್ಥಳ | ಚನ್ನಗಿರಿ | |
| ಸಾಕ್ಷಿಗೆ ದಿನಾಂಕಃ 06.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1) ಈ ಪ್ರಕರಣದ ಬಗ್ಗೆ ನನಗೆನು ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆಲಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ 16.09.2016 ರಂದು 2ನೇ ಆರೋಪಿಯಾದ ನನ್ನ ಗಂಡ ನನ್ನ ಹತ್ತಿರ ಬಂದು ಬಂಗಾರದ ನೆಕ್ಲೇಸ್ ನ್ನು ತೋರಿಸಿ ಇದು ನನ್ನ ಸ್ನೇಹಿತನಾದ ಅಫ್ರೋಜ್ ಅವರ ಅಕ್ಕನಿಗೆ ಆರೋಗ್ಯ ಸರಿಯಿಲ್ಲ ಚಿಕಿತ್ಸೆ ಕೊಡಿಸಲು ಹಣ ಬೇಕು ಎಲ್ಲಿಯಾದರೂ ಅಡವಿಟ್ಟು ದುಡ್ಡ ತೆಗೆದುಕೊಂಡು ಬಾ ಎಂದು ಹೇಳಿ ನೆಕ್ಲೇಸ್ ನ್ನು ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನಿಂದ ನೆಕ್ಲೇಸ್ ನ್ನು ತೆಗೆದುಕೊಂಡು ಮದ್ಯಾಹ್ನ 2.00 ಗಂಟೆಗೆ ಐ ಐ ಎಫ್ ಎಲ್ ಗೋಲ್ಡ್ ಲೋನ್ ಕಚೇರಿಗೆ ಹೋಗಿ ನನ್ನ ಗಂಡನಾದ 2ನೇ ಆರೋಪಿ ನೀಡಿದ ಬಂಗಾರದ ನೆಕ್ಲೇಸ್ ನ್ನು ಅಡವಿಟ್ಟು ರೂ. 66,000/- ಹಣವನ್ನು ತಂದು ನನ್ನ ಗಂಡನಾದ 2ನೇ ಆರೋಪಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು 2ನೇ ಆರೋಪಿ 1ನೇ ಆರೋಪಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ನಂತರ ನನಗೆ ಸದರಿ ನೆಕ್ಲೇಸ್ ನ್ನು ನೆಕ್ಲೇಸ್ ಕಳ್ಳತನ್ನದ್ದು ಎಂದು ಪೊಲೀಸರು ನನ್ನ ಗಂಡನನ್ನು ಕರೆದುಕೊಂಡು ಹೋಗುವಾಗ ತಿಳಿಯಿತು ಎಂದರೆ ಸರಿಯಲ್ಲ.

ಈ ವಿಚಾರವಾಗಿ ಪೊಲೀಸರ ಮುಂದೆ  ದಿಃ 05.09.2018 ರಂದು ನಾನು " ನಾನು -------- ಗೊತ್ತಾಯಿತು " ಎಂಬ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ತಿರಸ್ಕರಿಸಿದ ಹೇಳಿಕೆಯ ಭಾಗವನ್ನು ನಿಪಿ  11 ಎಂದು ಗುರುತಿಸಲಾಯಿತು.

2ನೇ ಆರೋಪಿ ನನ್ನ ಗಂಡನಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಎಲ್ಲಾ ವಿಚಾರ ಗೊತ್ತಿದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರುಃ ಇಲ್ಲ ಎಂದು ನುಡಿಯುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಗಾರ್ತಿಯ  ಮೂಲಕ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**02 ನೇ  ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**